**1** ನೇ ಹೆಚ್ಚುವರಿ ಜಿಲ್ಲಾ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ನಂಃ 24/2022

| | | |
|---|---|---|
| ಸಾಕ್ಷಿದಾರರ ಹೆಸರು | - ರಮೇಶ | ಪಿಡಬ್ಲೂ - 04 |
| ತಂದೆಯ ಹೆಸರು | - ಮೈಲಾ | ಸಿಡಬ್ಲೂ - 10 |
| ವಯಸ್ಸು | - 56 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಇಂದಿರಾನಗರ, ಕೈಮರ ಪೋಸ್ಟ್ ಚಿಕ್ಕಮಗಳೂರು | |

*(*ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು*,* ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ*.* ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು*.)*

ದಿನಾಂಕಃ 09-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು. ಫ್ರಾಸಾ.2 ನನ್ನ ದೂರದ ಸಂಬಂಧಿ. ಫ್ರಾಸಾ.1 ಗೊತ್ತು. ಚಾಸಾ.7 ಗೊತ್ತು. ಆಕೆ ಫ್ರಾಸಾ.2 ರವರ ಹೆಂಡತಿ. ಫ್ರಾಸಾ.3 , ಚಾಸಾ.9 ಗೊತ್ತು, ಅವರು ನನ್ನ ಸಂಬಂಧಿಕರು. ಮೃತ ಶೇಷಪ್ಪ ಅಲಿಯಾಸ್ ಶಶಿ ಗೊತ್ತು. ಆತ ಫ್ರಾಸಾ.2 ಮತ್ತು ಚಾಸಾ.7 ರವರ ಮಗ.

2. ಈಗ್ಗೆ 4 ವರ್ಷಗಳ ಹಿಂದೆ ಒಂದು ದಿನ ರಾತ್ರಿ 8 ಗಂಟೆ ಸುಮಾರಿಗೆ

ಫ್ರಾಸಾ.2 ರವರು ನನಗೆ ಫೋನ್ ಮಾಡಿ ತನ್ನ ಮಗ ಶೇಷಪ್ಪ ಅಲಿಯಾಸ್ ಶಶಿಯ ಕೊಲೆಯಾಗಿದೆ ಎಂದು ತಿಳಿಸಿದರು. ಆಗ ನಾನು ಹೊರಡಲು ಬಸ್ಸಿನ ಸೌಕರ್ಯ ಇಲ್ಲದಿದ್ದ ಕಾರಣ ಮಾರನೆ ದಿನ ನಾನು ನಮ್ಮ ಊರಿನಿಂದ ಹೊರಟು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಹೋದೆನು. ಸದರಿ ಆಸ್ಪತ್ರೆಯ ಶವಗಾರದಲ್ಲಿ ಶೇಷಪ್ಪ ಅಲಿಯಾಸ್ ಶಶಿಯ ಶವ ಇತ್ತು. ಆತನ ತಲೆ, ಮುಖ, ಕೆನ್ನೆ, ಕುತ್ತಿಗೆ ಮತ್ತು ಹೊಟ್ಟೆಯ ಭಾಗಕ್ಕೆ ಯಾವುದೋ ಆಯುಧದಿಂದ ಹೊಡೆದು ಕೊಲೆ ಮಾಡಿರುವುದು ಕಂಡುಬಂತು. ಆ ಬಗ್ಗೆ ಶೇಷಪ್ಪ ಕೆಲಸ ಮಾಡಿಕೊಂಡಿದ್ದ ತೋಟದ ಮಾಲೀಕರಾದ ಚಾಸಾ.14 ಮತ್ತು ಚಾಸಾ.15 ರವರನ್ನು ವಿಚಾರಿಸಿದಾಗ ಅವರ ತೋಟದಲ್ಲಿ ಶೇಷಪ್ಪ ಮತ್ತು ಆರೋಪಿ ಒಟ್ಟಿಗೆ ಒಂದೇ ಕೂಲಿ ಲೈನ್ ಮನೆಯಲ್ಲಿ ವಾಸವಾಗಿದ್ದುದ್ದಾಗಿ, ಬುಧವಾರದಂದು ಕೆಲಸಕ್ಕೆ ರಜೆ ಇದ್ದುದ್ದಾಗಿ, ಗುರುವಾರ ಸಹ ಆರೋಪಿ ಮತ್ತು ಶೇಷಪ್ಪ ಕೆಲಸಕ್ಕೆ ಬಾರದಿದ್ದ ಕಾರಣ ಅವರು ಆರೋಪಿ ಮತ್ತು ಶೇಷಪ್ಪನನ್ನು ಕೆಲಸಕ್ಕೆ ಬರುವಂತೆ ಕರೆಯಲು ಅವರು ವಾಸವಾಗಿದ್ದ ಮನೆಗೆ ಹೋದಾಗ ಅಲ್ಲಿ ಶೇಷಪ್ಪ ಕೊಲೆಯಾಗಿ ಬಿದ್ದಿರುವುದನ್ನು ನೋಡಿದ್ದಾಗಿ, ಆರೋಪಿಯು ಶೇಷಪ್ಪನೊಂದಿಗೆ ಜಗಳ ಮಾಡಿಕೊಂಡು ಆತನನ್ನು ಕೊಲೆ ಮಾಡಿ ಓಡಿ ಹೋಗಿದ್ದಾಗಿ ತಿಳಿಸಿದರು.

3. ನಾನು ಶೇಷಪ್ಪನ ಶವವನ್ನು ನೋಡಲು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಹೋಗಿದ್ದಾಗ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ. ಸಾಕ್ಷಿಗೆ ಒಂದು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ ಅವುಗಳಲ್ಲಿ ಕಂಡುಬರುವ ಶವ ಶೇಷಪ್ಪನದು ಎಂದು ನುಡಿದಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ಫೋಟೋಗಳನ್ನು

ಈಗಾಗಲೇ ನಿಪಿ.9 ಮತ್ತು ಪಿ.10 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಈಗಾಗಲೇ ನಿಪಿ.3 ರಿಂದ ಪಿ.5 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ಅವುಗಳಲ್ಲಿ ಶೇಷಪ್ಪನ ಶವ ಮತ್ತು ಆತನ ಮೈಮೇಲೆ ನಾನು ನೋಡಿದ ಗಾಯಗಳು ಕಂಡುಬರುತ್ತದೆ ಎಂದು ನುಡಿಯುತ್ತಾರೆ.

4. ಆದಾದ ಸುಮಾರು 2 ತಿಂಗಳುಗಳ ನಂತರ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ನನ್ನನ್ನು, ಫ್ರಾಸಾ.2 ಮತ್ತು ಚಾಸಾ.7 ರವರು ತಮ್ಮ ಠಾಣೆಗೆ ಶೇಷಪ್ಪನನ್ನು ಕೊಲೆ ಮಾಡಿದ್ದ ಆರೋಪಿಯನ್ನು ದಸ್ತಗಿರಿ ಮಾಡಿರುವುದಾಗಿ ತಿಳಿಸಿ ಕರೆಸಿದ್ದರು. ಅದರಂತೆ ನಾನು, ಫ್ರಾಸಾ.2 ಮತ್ತು ಚಾಸಾ.7 ರವರು ಸದರಿ ಠಾಣೆಗೆ ಹೋಗಿ ಪೊಲೀಸರು ದಸ್ತಗಿರಿ ಮಾಡಿದ್ದ ಆರೋಪಿಯನ್ನು ಅಲ್ಲಿ ನೋಡಿ ಗುರುತಿಸಿ ಆತನ ಬಗ್ಗೆ ತಿಳಿದುಕೊಂಡಿರುತ್ತೇವೆ. ಆ ಬಗ್ಗೆ ಆ ದಿನ ಪೊಲೀಸರಿಗೆ ಮತ್ತೊಂದು ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲುಃ</u>

ಆರೋಪಿ ಪರ ವಕೀಲರು ಈ ದಿನ ಮೆಮೋ ಸಲ್ಲಿಸಿ ಪ್ರಕರಣದಿಂದ ನಿವೃತ್ತಿ ಹೊಂದಿರುತ್ತಾರೆ. ನ್ಯಾಯಾಂಗ ಬಂಧನದಲ್ಲಿರುವ ಆರೋಪಿಯು ಬೇರೆ ವಕೀಲರನ್ನು ನೇಮಿಸಿಕೊಳ್ಳಲು ಸಮಯ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ